**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Application** : 09/2024

ಎ. ಡಬ್ಲ್ಯೂ- 1

**ದಿನಾಂಕ 11.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ ಎಂ.ಎಸ್.ವಿ. ವಕೀಲರಿಂದಃ**

ಸಂಸ್ಥೆಯವರು ನನಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿರುವ ಕಾರಣ ಬೇರೆ ಯಾವುದೇ ರೀತಿಯ ಪರಿಹಾರವನ್ನು ನೀಡುವ ಅಗತ್ಯ ಇಲ್ಲ ಎಂದರೆ ಸರಿಯಲ್ಲ. ನಾನು ರೂ.50 ಲಕ್ಷ ಹಣ ಬರಬೇಕು ಎಂದು ಅರ್ಜಿಯಲ್ಲಿ ಕೋರಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಇದೇ ರೀತಿ 2009 ರಲ್ಲೂ ಕೂಡ ಕಲಂ 33 ಸಿ2 ರ ಪ್ರಕಾರ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ದಿನದ ನ್ಯಾಯಾಲಯದ ಆದೇಶದ ಪ್ರಕಾರ ಸಂಸ್ಥೆಯವರು ರೂ.45,668/-ಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಂಸ್ಥೆಯವರು ದಿನಾಂಕ 29.05.1982 ರಿಂದ 23.03.1991 ರವರೆಗೆ ಒಟ್ಟು ರೂ.87,562/-ಗಳನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸಂಸ್ಥೆಯವರು ದಿನಾಂಕ 23.03.1991 ರಿಂದ 08.01.2005 ರವರೆಗೆ ಬಾಕಿ ವೇತನ ಒಟ್ಟು ರೂ.1,45,559/- ಗಳನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಸೇವೆ ಸಲ್ಲಿಸಿದ ಅವಧಿಗೆ ರೂ.2,10,526/- ಗ್ರ್ಯಾಚ್ಯೂಟಿ ಮೊತ್ತವನ್ನು ಮೊದಲನೇ ಬಾರಿಗೆ ಹಾಗೂ ಅದೇ ರೀತಿ ವ್ಯತ್ಯಾಸದ ಗ್ರ್ಯಾಚ್ಯೂಟಿ ಬಾಕಿ ರೂ.42,781/-ಗಳನ್ನು ಸಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ರೂ.98,879/-ಗಳನ್ನು ಲೀವ್ ಎನಕ್ಯಾಶಮೆಂಟ್ ಎಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಒಟ್ಟು ರೂ.4,89,771/- ಗಳನ್ನು ಸಂಸ್ಥೆಯವರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲೂ.ಪಿ. ಸಂಖ್ಯೆ 1687/2016 ಹಾಗೂ ಸಂಸ್ಥೆಯವರು ನನ್ನ ಮೇಲೆ ಸಲ್ಲಿಸಿದ್ದ ಡಬ್ಲೂ.ಪಿ. ಸಂಖ್ಯೆ 5363/2019, ಇದರಲ್ಲಿ ನಾನು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯ ವಜಾ ಮಾಡಿರುತ್ತದೆ ಎಂದರೆ ಸುಳ್ಳು ಹಾಗೂ

ಸಂಸ್ಥೆಯವರು ನೀಡಿದ್ದ ಹಣ ಸರಿ ಇರುತ್ತದೆ ಎಂದು ಸಂಸ್ಥೆಯವರ ಅರ್ಜಿಯನ್ನು ಪುರಸ್ಕರಿಸಿರುತ್ತದೆ ಎಂದರೆ ಸರಿಯಲ್ಲ. ನನಗೆ ಈಗಾಗಲೇ ಎಲ್ಲ ಮೊತ್ತವನ್ನು ಸಂಸ್ಥೆಯವರು ಪಾವತಿ ಮಾಡಿರುವ ಕಾರಣ ಯಾವುದೇ ಹಣವನ್ನು ನೀಡಲು ಬಾಧ್ಯರಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**